

## ಪ್ರಾರ್ಥನೆ

### ಶ್ರೀಶಂಕರಾಚಾರ್ಯರ "ಗೌರೀದಶಕಮ್" ಸ್ತೋತ್ರದಿಂದ

**ಲೀಲಾಲಬ್ಧಸ್ಥಾಪಿತಲುಪ್ತಾಖಿಲಲೋಕಾಂ ಲೋಕಾತೀತೈರ್ಯೋಗಿಭಿರಂತಶ್ಚಿರಮೃಗ್ಯಾಮ್ ।**
**ಬಾಲಾದಿತ್ಯಶ್ರೇಣಿಸಮಾನದ್ಯುತಿಪುಂಜಾಂ ಗೌರೀಮಂಬಾಮಂಬುರುಹಾಕ್ಷೀಮಹಮೀಡೇ ॥**

ಯಾರು ಸಮಸ್ತ ಜಗತ್ತಿನ ಸೃಷ್ಟಿಸ್ಥಿತಿ ಲಯಗಳನ್ನು ಲೀಲಾಜಾಲವಾಗಿ ಮಾಡುತ್ತಾಳೆಯೊ, ಯಾರನ್ನು ಲೋಕಾತೀತರಾದ ಯೋಗಿಗಳು ತಮ್ಮ ಹೃದಯದಲ್ಲಿ ಹುಡುಕುತ್ತಿರುವರೊ, ಯಾರ ಕಾಂತಿಯು ಬಾಲಸೂರ್ಯನ ಕಿರಣಗಳಂತೆ ಹೊಳೆಯುತ್ತದೆಯೊ, ಅಂತಹ ಕಮಲಾಕ್ಷಿಯಾದ ಗೌರೀಮಾತೆಯನ್ನು ಸ್ತುತಿಸುವೆನು.

**ಪ್ರತ್ಯಾಹಾರಧ್ಯಾನಸಮಾಧಿಸ್ಥಿತಿಭಾಜಾಂ ನಿತ್ಯಂ ಚಿತ್ತೇ ನಿರ್ವೃತಿಕಾಷ್ಠಾಂ ಕಲಯಂತ್ರೀಮ್ ।**
**ಸತ್ಯಜ್ಞಾನಾನಂದಮಯೀಂ ತಾಂ ತನುರೂಪಾಂ ಗೌರೀಮಂಬಾಮಂಬುರುಹಾಕ್ಷೀಮಹಮೀಡೇ ॥**

ಯಾರು ಪ್ರತ್ಯಾಹಾರ ಧ್ಯಾನ-ಸಮಾಧಿಗಳಲ್ಲಿ ನಿರತರಾಗಿರುವ ಯೋಗಿಗಳ ಚಿತ್ತದಲ್ಲಿ ಸದಾ ಪರಮಾನಂದವನ್ನು ನೀಡುತ್ತಿರುವಳೋ, ಅಂತಹ ಸತ್ಯ-ಜ್ಞಾನ-ಆನಂದ-ಸ್ವರೂಪಳಾದ ಸೂಕ್ಷ್ಮರೂಪಳಾದ ಕಮಲಾಕ್ಷಿಯಾದ ಗೌರೀಮಾತೆಯನ್ನು ಸ್ತುತಿಸುವೆನು.

**ಆದಿಕ್ಷಾಂತಾಮಕ್ಷರಮೂರ್ತ್ಯಾ ವಿಲಸಂತೀಂ ಭೂತೇ ಭೂತೇ ಭೂತಕದಂಬಪ್ರಸವಿತ್ರೀಮ್ ।**
**ಶಬ್ದಬ್ರಹ್ಮಾನಂದಮಯೀಂ ತಾಂ ತಡಿದಾಭಾಂ ಗೌರೀಮಂಬಾಮಂಬುರುಹಾಕ್ಷೀಮಹಮೀಡೇ ॥**

ಯಾರು 'ಅ' ಕಾರದಿಂದ 'ಕ್ಷ' ಕಾರದವರೆಗಿನ ಸಮಸ್ತ ವರ್ಣಮಾಲೆಯ ಮೂರ್ತಸ್ವರೂಪಳಾಗಿ ವಿರಾಜಿಸುತ್ತಿರುವಳೊ, ಯಾರು ಪ್ರತಿಯೊಂದು ವಿಧಧ ಪ್ರಾಣಿವರ್ಗದಲ್ಲಿಯೂ ಆಯಾ ವರ್ಗದ ಪ್ರಾಣಿಸಂತತಿಗೆ ಜನ್ಮದಾತೆಯೊ, ಅಂತಹ ವಿದ್ಯುತ್ಪ್ರಭೆಯಿಂದ ಕೂಡಿದ ಶಬ್ದಬ್ರಹ್ಮಾನಂದಮಯಳಾದ ಕಮಲಾಕ್ಷಿಯಾದ ಗೌರೀಮಾತೆಯನ್ನು ಸ್ತುತಿಸುವೆನು.

---

## ಸೂಕ್ತಿಪ್ರಭ



✪ ಪುರುಷರು ಸ್ತ್ರೀಯರು ಸಮಭಾಗಿಗಳಾಗಿರದ ಸಮಾಜವನ್ನು ನಾಗರಿಕ ಸಮಾಜವೆಂದು ಪರಿಗಣಿಸಲಾಗದು.

—ವಿಜಯಲಕ್ಷ್ಮಿ ಪಂಡಿತ್.

✪ ಎಲ್ಲಿ ಬಲಪ್ರಯೋಗದ ಆವಶ್ಯಕತೆಯಿದೆಯೋ ಅಲ್ಲಿ ಅದನ್ನು ಧೀರತನದಿಂದ, ನಿರ್ಣಾಯಕವಾಗಿ ಮತ್ತು ಸಂಪೂರ್ಣವಾಗಿ ಪ್ರಯೋಗಿಸಬೇಕು. —ಟ್ರಾಟ್‌ಸ್ಕಿ.

✪ ಶಿಕ್ಷಣವು ನೈತಿಕ ಚಾರಿತ್ರ್ಯವುಳ್ಳ, ಜಾಗೃತ ಮನಸ್ಸುಳ್ಳ, ಸುದೃಢ ಶರೀರವುಳ್ಳ ಪರಿಪೂರ್ಣ ಮಾನವರನ್ನು ತಯಾರಿಸಬೇಕು. —ಪ್ಲೇಟೊ.

✪ ಜ್ಞಾನದಲ್ಲಿ ಎರಡು ವಿಧ: ಒಂದು ನಮಗೆ ಆಗಲೇ ತಿಳಿದಿರುವ ವಿಷಯಗಳು. ಎರಡನೆಯದು ಯಾವುದರ ಬಗ್ಗೆ ನಾವು ವಿಷಯ ಸಂಗ್ರಹಿಸಬಹುದೋ ಅದು.

—ಸ್ಯಾಮ್ಯುಯಲ್ ಜಾನ್ಸನ್.

✪ ಕೆಲಸ ನಮ್ಮನ್ನು ಬೇಸರ, ದುಶ್ಚಟ ಮತ್ತು ಕೊರತೆ— ಈ ಮೂರು ಕೆಡುಕುಗಳಿಂದ ರಕ್ಷಿಸುತ್ತದೆ. —ವಾಲ್ಟೇರ್.

✪ ಆತ್ಮವಿಶ್ವಾಸವನ್ನು ಗಳಿಸಿಕೊಂಡೆನೆಂದರೆ ಜೀವನದ ರಹಸ್ಯವನ್ನು ಅರಿತಂತೆಯೇ. — ಗಯಟೆ

✪ ಒಂದು ರಾಷ್ಟ್ರದ ದೀರ್ಘಕಾಲೀನ ಪ್ರಗತಿಯ ಸಂಕೇತ ಅದರ ಪ್ರಜೆಗಳನ್ನು ಆಧರಿಸಿದೆ. —ಜೆ.ಎಸ್. ಮಿಲ್.

✪ ಬಯಕೆ ಇಲ್ಲದಿರುವುದು ದಿವ್ಯ ಗುಣ. ಮಾನವ ಕಡಿಮೆ ಬಯಸಿದಷ್ಟೂ ಅವನು ದಿವ್ಯತೆಯ ಬಳಿ ಸಾರುತ್ತಾನೆ.

—ಸಾಕ್ರಟಿಸ್.

✪ ಒಂದು ಘಂಟೆ ಸಮಯವನ್ನು ವ್ಯರ್ಥವಾಗಿ ಕಳೆಯುವವನು ಜೀವನದ ಮೌಲ್ಯವನ್ನೇ ತಿಳಿದಿರಲಾರ.

—ಚಾರ್ಲ್ಸ್ ಡಾರ್ವಿನ್.

✪ ಶಂಖದಿಂದ ಬರುವ ನೀರು ತೀರ್ಥವಾಗುತ್ತದೆ, ಮಡಕೆಯಿಂದ ಬಂದರೆ ಸಾಮಾನ್ಯವಾದ ನೀರಾಗುತ್ತದೆ. ಆದರೆ ನೀರು ಒಂದೇ.

✪ ಚಿಂತೆಯು ಮುತ್ತಿನ ಚಿಪ್ಪಿನೊಳಗೆ ಸೇರಿಕೊಳ್ಳುವ ಮರಳಿನಂತೆ. ಸ್ವಲ್ಪವೇ ಇದ್ದರೆ ಸುಂದರ ಮುತ್ತುಗಳು ತಯಾರಾಗುತ್ತವೆ. ಜಾಸ್ತಿಯಾದರೆ ಪ್ರಾಣಿಯೇ ಸಾಯುತ್ತದೆ.

✪ ಕಾಲು ಜಾರಿದರೆ ಮತ್ತೆ ಏಳಬಹುದು, ನಾಲಿಗೆ ತಪ್ಪಿ ನುಡಿದರೆ ಸುಧಾರಿಸಿಕೊಳ್ಳುವುದು ಅಸಾಧ್ಯವೇ ಆಗಬಹುದು.